ಸಾಮಗ್ರಿಗಳು ಹಾಳಾಗದಂತೆಯೂ ಹಾಗೂ ಆಳುಗಳು ವೃಥಾ ಕಾಲಹರಣ ಮಾಡದಂತೆಯೂ ಎಚ್ಚರ ವಹಿಸಿದಳು.

ಸ್ವಲ್ಪ ದಿನಗಳಲ್ಲಿಯೇ ಮನೆ ಕಟ್ಟುವ ಕೆಲಸ ಪೂರ್ಣವಾಯಿತು. ಮಿಸೆಸ್ ಮಲೀಕ್ ಹೊಸ ಮನೆಗೆ ತಕ್ಕ ಹಾಗೆ ಹೊಸ ಪೀಠೋಪಕರಣಗಳೇ ಆಗಬೇಕೆಂದಳು. ತನ್ನ ಹಳೆ ಪೀಠೋಪಕರಣಗಳ ಒಂದು ತುಂಡನ್ನು ಸಹ ಹೊಸ ಮನೆಯೊಳಗೆ ಸೇರಿಸಲಾರಳೆಂದು ಖಡಾಖಂಡಿತವಾಗಿ ಹೇಳಿಬಿಟ್ಟಳು.

ಹೀಗೆ ಅವರಿನ್ನೂ ಹೊಸ ಮನೆಗೆ ಹೋಗುವ ಯೋಚನೆಯಲ್ಲಿರುವಾಗಲೇ ಸರಕಾರ ಅವರ ಮನೆಯನ್ನು ತಾತ್ಕಾಲಿಕವಾಗಿ ವಶಪಡಿಸಿಕೊಂಡ ಸುದ್ದಿಯೊಂದು ಬಂತು. ಇದು ಹೊಸಮನೆಯಲ್ಲಿ ಹೋಗಿರಲು ಎಷ್ಟೆಲ್ಲಾ ತಯಾರಿ ಮಾಡಿಕೊಂಡಿದ್ದ ಮಿಸೆಸ್ ಮಲೀಕ್‌ಳನ್ನು ರೊಚ್ಚಿಗೆಬ್ಬಿಸಿತು. ಆದರೆ ಅವಳು ಅಸಹಾಯಕಳಾಗಿದ್ದಳು. ಸರಕಾರಕ್ಕೆ ಮನಸಾರೆ ಶಾಪ ಹಾಕಿ ತನ್ನ ಹೊಟ್ಟೆಯುರಿಯನ್ನು ಕಡಿಮೆಮಾಡಿಕೊಂಡಳು. ತಾನೇ ನಿಂತು ಕಟ್ಟಿಸಿದ ಮನೆಯಲ್ಲಿ ತಕ್ಷಣಕ್ಕೆ ಬಾಳಿ ಬದುಕಲಾರದಹಾಗೆ ಆಯ್ತಲ್ಲ ಎಂದು ಕಣ್ಣೀರಿಟ್ಟಳು. ಆದರೆ ಮಿಸ್ಟರ್ ಮಲೀಕ್ ಸರಕಾರದಿಂದ ತಮಗೆ ಎಂಥ ಒಳ್ಳೆ ಬಾಡಿಗೆ ಸಿಗುತ್ತದೆ ಎನ್ನುವುದನ್ನು ಹೇಳಿದಾಗ ಅವಳು ಸುಮ್ಮನಾದಳು.

ಮನೆ ಕಟ್ಟಿಸುವಾಗ ಮಿಸೆಸ್ ಮಲೀಕ್ ಆ ಕಾಲೊನಿಯಲ್ಲಿನ ನೆರೆಹೊರೆಯವರೊಂದಿಗೆ ಸ್ನೇಹವನ್ನು ಬೆಳೆಸಿದ್ದಳಲ್ಲದೆ ಅವರ ಸಲಹೆ ಸಹಕಾರಗಳನ್ನೂ ಪಡೆದಿದ್ದಳು. ಅವರೆಲ್ಲರ ಮುಂದೆ ಆ ಮನೆಯಲ್ಲಿ ಜಂಭದಿಂದ ಬಾಳಿ ಬದುಕಿ ತೋರಿಸಬೇಕೆಂದು ತುದಿಗಾಲಲ್ಲಿ ಕಾಯುತ್ತಿದ್ದಳು. ಆದರೆ ಇದೀಗ ಅವಳ ಉತ್ಸಾಹಕ್ಕೆ ತಣ್ಣೀರೆರೆಚಿದಂತಾಗಿತ್ತು.

ಈ ನಡುವೆ ಅವರಿಗೆ ದೆಹಲಿಯಿಂದ ಮತ್ತೆ ಬೇರೆ ಕಡೆಗೆ ವರ್ಗವಾಯಿತು. ಮಿಸೆಸ್ ಮಲೀಕ್ ಅದೇ ಊರಿನಲ್ಲಿದ್ದುಕೊಂಡು ತನ್ನ ಹೊಸ ಮನೆಯಲ್ಲಿ ವಾಸ ಮಾಡದಿರುವುದಕ್ಕೆ ಪಶ್ಚಾತಾಪ ಪಡುವದಕ್ಕಿಂತ ಬೇರೆ ಊರಿನಲ್ಲಿದ್ದುಕೊಂಡು ತೃಪ್ತಿಪಟ್ಟುಕೊಳ್ಳುವುದೇ ಮೇಲು ಎಂದುಕೊಂಡು ಗಂಡನೊಟ್ಟಿಗೆ ಹೊರಟಳು. ಜೊತೆಗೆ ಅದರಿಂದ ಬರುತ್ತಿದ್ದ ಒಳ್ಳೆ ಮೊತ್ತದ ಬಾಡಿಗೆ ಅವಳನ್ನು ಅದ್ವೇಗೋ ಸಮಾಧಾನಪಡಿಸಿತ್ತು.

ಅಲ್ಲಿಂದಾಚೆ ಮಲೀಕ್‌ರಿಗೆ ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗವಾಗುತ್ತಲೇ ಹೋಯಿತು. ಮತ್ತೆ ದೆಹಲಿಗೆ ವಾಪಸಾಗಲು ಸುಮಾರು ವರ್ಷಗಳೇ ಹಿಡಿದವು. ಈ ಮಧ್ಯೆ ಅವರ ಮಗಳಿಗೆ ಮದುವೆ ಆಯಿತು ಹಾಗೂ ಮಿಸೆಸ್ ಮಲೀಕ್‌ಳ ಅತ್ತೆ ತೀರಿಕೊಂಡಳು. ಅವರ ಅದೃಷ್ಟಕ್ಕೆ ಒಂದು ರೀತಿಯಲ್ಲಿ ಸರಕಾರ ಅವರ ಮನೆಯನ್ನು ವಶಪಡಿಸಿಕೊಂಡಿದ್ದು ಒಳ್ಳೆಯದೇ ಆಗಿಯಿತು. ಏಕೆಂದರೆ ಸರಕಾರ ತಿಂಗಳು ತಿಂಗಳು ಸರಿಯಾಗಿ ಬಾಡಿಗೆಯನ್ನು ಕೊಡುತ್ತಿತ್ತು ಮತ್ತು ಅವರಿಂದ ಯಾವುದೇ ತಂಟೆ ತಕರಾರಿರಲಿಲ್ಲ. ಈ ಬಾಡಿಗೆದಾರರೋ ಒಂದು ದೊಡ್ಡ ತಲೆನೋವು! ಅವರದು ಸದಾ ಏನಾದರೊಂದು ದೂರು ಇಲ್ಲವೇ ಬೇಡಿಕೆ ಇದ್ದೇ ಇರುತ್ತದೆ. ಜೊತೆಗೆ ಸಮಯಕ್ಕೆ ಸರಿಯಾಗಿ ಬಾಡಿಗೆಯನ್ನು ಕೊಡದೆ ಸತಾಯಿಸುತ್ತಾರೆ. ಈಗ ಬಾಡಿಗೆಯು ಸರಕಾರದಿಂದ ನೇರವಾಗಿ ಅವರ ಬ್ಯಾಂಕ್ ಖಾತೆಗೆ ತಿಂಗಳು ತಿಂಗಳು ಸಮಯಕ್ಕೆ ಸರಿಯಾಗಿ ತಪ್ಪದೇ ಜಮೆಯಾಗುತ್ತಿತ್ತು.

ಈಗ ಮಲೀಕ್‌ರ ಮಗ ಮದುವೆಯಾಗುವುದೊಂದು ಬಾಕಿ ಉಳಿದಿತ್ತು. ಅವನ ಮದುವೆಯೊಂದನ್ನು ಮಾಡಿಮುಗಿಸಿಬಿಟ್ಟರೆ ತಮ್ಮೆಲ್ಲಾ ಜವಾಬ್ದಾರಿಗಳು ಮುಗಿದಂತಾಗುತ್ತವೆ ಎಂದು ಮಲೀಕ್‌ರು ತಮ್ಮ ಮಗನಿಗೆ ತಕ್ಕ ಹುಡುಗಿಯನ್ನು ಹುಡುಕತೊಡಗಿದರು. ಮಿಸ್ಟರ್ ಮಲೀಕ್ ಈ ಕೆಲಸವನ್ನು ತಾವು ನಿವೃತ್ತಿ ಹೊಂದುವುದಕ್ಕಿಂತ ಮೊದಲೇ ಮಾಡಿಮುಗಿಸಬೇಕೆಂದುಕೊಂಡರು.

ಅಂತೂ ತಾವು ಅಂದುಕೊಂಡಂತೆ ಮಿಸ್ಟರ್ ಮಲೀಕ್ ತಮ್ಮ ನಿವೃತ್ತಿಗಿಂತ ಮೊದಲೇ ಮಗನ ಮದುವೆಯನ್ನು ಮಾಡಿ ಮುಗಿಸಿದರು. ಆದರೆ ಅವರ ಮನೆಯಿನ್ನೂ ಸರಕಾರದ ಸುಪರ್ದಿಯಿಂದ